

ರೂಪಕವಿರಬೇಕು ಎಂದು ಕಾದಂಬರಿಯೋದಿದ ಮೇಲೆ ಅನಿಸುತ್ತದೆ. ಬದುಕಿನ ಮೆಳೆಯಲ್ಲಿ ಸಿಂಗಾರೆವ್ವ ಸಿಕ್ಕಿ ಒದ್ದಾಡುವ ರೀತಿ ನಮ್ಮನ್ನೂ ಒದ್ದಾಡಿಸಿಬಿಡುತ್ತದೆ. ಅಂಥಾ ಘನಘೋರ ಮೆಳೆಯಲ್ಲಿ ಸಿಕ್ಕಿ ಬಿದ್ದಾಕೆ ಉಳಿಯಲು ಸಾಧ್ಯವೇ ಎಂದು ವಿಷಾದ ಎದೆ ತುಂಬಿ, ನಿಟ್ಟುಸಿರು ಹುಟ್ಟುವ ಹೊತ್ತಿನಲ್ಲಿ ಆ ಜಟಿಲ ಕಾನನದ ಕುಟಿಲ ಪಥದಿಂದ ಅವಳು ಹೇಗೋ ಹೊರಬಿದ್ದು ಮತ್ತೆ ಓಟ ಶುರು ಮಾಡುತ್ತಾಳೆ. ಅದೇ ಅಲ್ಲವೇ ಜೀವ ಜಗತ್ತಿನ ಭರವಸೆಯ ಕಿರಣ!

ಸಿಂಗಾರೆವ್ವನ ಹೆತ್ತ ತಂದೆ ಗೌಡ ಆಸ್ತಿಗೋಸ್ಕರ ಉಪಾಯ ಮಾಡಿ, ಮಗಳನ್ನು ಒಂದು ಹೆಣಕ್ಕೆ ಮದುವೆ ಮಾಡಿಸುತ್ತಾನೆ. ಹೆಣದೊಂದಿಗೆ ಮದುವೆಯಾಗುವ ಸಂಭ್ರಮದಿಂದ ಶುರುವಾಗುವ ಅವಳ ನೋವಿನ ಕಥೆಗೆ ಕೊನೆಯೇ ಇಲ್ಲ. ಆ ಆಘಾತದಿಂದ ಸಿಂಗಾರೆವ್ವ ಚೇತರಿಸಿಕೊಳ್ಳುವ ಮೊದಲೇ, ರೋಗಿಷ್ಟ, ನಪುಂಸಕನಂತಹ ಮತ್ತು ಬೇಜವಾಬ್ದಾರಿಯ ವ್ಯಕ್ತಿ ಸರಗಂ ದೇಸಾಯಿಗೆ ಮರು ಮದುವೆ ಮಾಡಿಸುತ್ತಾನೆ. ಅವನೋ ಮನುಷ್ಯನಾಗಿ ಹುಟ್ಟಿಯೂ ಮನುಷ್ಯ ಹೃದಯವಿಲ್ಲದವನು. ಸದಾ ಬಹುವಚನದಲ್ಲೇ ಇವಳನ್ನು ಸಂಬೋಧಿಸುವ, ಮರ್ಯಾದೆ ಕೊಡುವೆನೆಂಬ ನಾಟಕ ಮಾಡಿ ಹೇವರಿಕೆ ಹುಟ್ಟಿಸುವ ಅವನು ದೈಹಿಕ, ಮಾನಸಿಕ ಹೋಗಲಿ ಆರ್ಥಿಕವಾಗಿಯೂ ಅವಳಿಗೆ ಆಸರೆಯಾಗಲಾರದವನು. ಗಂಡನು ಕೊಡುವ ಒಣ ಮರ್ಯಾದೆಯಿಂದಾಗಿ ಅವಳ ಮೈಯಲ್ಲಿ ಮುಳ್ಳುಗಳೇಳುತ್ತವೆ. ಆದರೂ ಗಂಡನೆಂದು ಬದುಕಿಗೆ ಬಂದವನ ಜೊತೆಗೆ ಬಾಳಲೇಬೇಕಲ್ಲವೇ. ಆತನನ್ನು ಸರಿ ದಾರಿಗೆ ತರಲು ಸಿಂಗಾರೆವ್ವ ಮಾಡುವ ಪ್ರಯತ್ನಗಳು ಒಂದೇ ಎರಡೇ. 'ಈ ದೇಸಾಯಿ ಬದಲು ಒಂದು ಕಲ್ಲನ್ನಾದರೂ ಮದುವೆಯಾಗಿದ್ದಿದ್ದರೆ ಅದೂ ತನ್ನ ಸ್ನಿಗ್ಧ ಪ್ರೀತಿಗೆ ಕರಗಿಯೇ ಬಿಡುತ್ತಿತ್ತೇನೋ! ರೋಗಿಷ್ಟ ಗಂಡನನ್ನಾದರೂ ಒಲಿಸಿಕೊಂಡು ಬಾಳು ಸರಿ ಮಾಡಿಕೊಂಡೇನು' ಅನ್ನುವ ಅವಳ ಛಲವನ್ನು ಆ ಶಿವನೂ ಆಗಿಸಿಕೊಡುವುದಿಲ್ಲ.

ಅತ್ತ ಮುದಿ ಅತ್ತೆಗೆ ಮೊಮ್ಮಗುವನ್ನು ಕಾಣುವ ಆಸೆ.